ಸಂಪೂರ್ಣ ವರದಿಯನ್ನು ಹೊಂದಿದ ಸಿಡಿಯೊಂದನ್ನು ಈ ಕೈಪಿಡಿಗೆ ಲಗತ್ತಿಸಲಾಗಿದೆ.

ನಿವೇದಿತ

**(ಇ ಪಿ ನಿವೇದಿತ)**

ಮಹಾಲೇಖಾಪಾಲರು

ಸಾಮಾನ್ಯ ಮತ್ತು ಸಾಮಾಜಿಕ ವಲಯ ಲೆಕ್ಕಪರಿಶೋಧನೆ

ಕರ್ನಾಟಕ

## 2018ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಸಂಖ್ಯೆ–1 (ರಾಜ್ಯ ಹಣಕಾಸಿನ ವ್ಯವಹಾರಗಳು)

### ಪೀಠಿಕೆ

ಈ ವರದಿಯು ಮೂರು ಅಧ್ಯಾಯಗಳನ್ನು ಹೊಂದಿದೆ.

1

**ಅಧ್ಯಾಯ I (ರಾಜ್ಯ ಸರ್ಕಾರದ ಹಣಕಾಸಿನ ವ್ಯವಹಾರಗಳು)** ಈ ಅಧ್ಯಾಯವು ರಾಜ್ಯ ಸರ್ಕಾರದ ಹಣಕಾಸು ಲೆಕ್ಕಗಳ ಪರಿಶೋಧನೆಯನ್ನು ಆಧರಿಸಿದ್ದು, 31 ಮಾರ್ಚ್ 2017ರಲ್ಲಿದ್ದಂತೆ ಕರ್ನಾಟಕ ರಾಜ್ಯ ಸರ್ಕಾರದ ವಿತ್ತ ಸ್ಥಿತಿಯನ್ನು ಮಾಪನ ಮಾಡುತ್ತದೆ. ಜೊತೆಗೆ ಈ ವರದಿಯು, ಬದ್ಧವೆಚ್ಚಗಳ ಪ್ರವೃತ್ತಿ, ಸಾಲವಿಧಾನಗಳ ವಿತ್ತೀಯ ಪ್ರಮಿತಿಗಳ ಮೇಲೆ ಪರಿಣಾಮ ಬೀರುವ ಕೆಲವು ಲೆಕ್ಕ ಹೊಂದಾಣಿಕೆಗಳ ಒಳನೋಟವನ್ನು ನೀಡುತ್ತವೆ.

2

**ಅಧ್ಯಾಯ II (ಹಣಕಾಸು ನಿರ್ವಹಣೆ ಮತ್ತು ಆಯವ್ಯಯ ನಿಯಂತ್ರಣ)** ಈ ಅಧ್ಯಾಯವು ಧನವಿನಿಯೋಗ ಲೆಕ್ಕಗಳನ್ನು ಆಧರಿಸಿದ್ದು, ಧನವಿನಿಯೋಗ ವಿವರಗಳನ್ನು ಮತ್ತು ಸೇವೆಗಳನ್ನು ಒದಗಿಸುವ ಇಲಾಖೆಗಳು, ಹಂಚಿಕೆಯಾದ ಸಂಪನ್ಮೂಲಗಳನ್ನು ಹೇಗೆ ನಿರ್ವಹಿಸಿವೆ ಎಂಬ ವಿವರಗಳನ್ನು ನೀಡುತ್ತದೆ. ವ್ಯವಹಾರಗಳ ಪಾರದರ್ಶಕತೆಯನ್ನು ಬಾಧಿಸುವ ಆಯವ್ಯಯದ ಅಂಶಗಳನ್ನೂ ಸಹ ಈ ಅಧ್ಯಾಯದಲ್ಲಿ ಸೇರಿಸಲಾಗಿದೆ.

3

**ಅಧ್ಯಾಯ III (ಆರ್ಥಿಕ ನಿರೂಪಣೆ):** ಈ ಅಧ್ಯಾಯವು ಕರ್ನಾಟಕ ಸರ್ಕಾರದ ವಿವಿಧ ವರದಿ ಸಲ್ಲಿಕಾ ಅಗತ್ಯಗಳು ಮತ್ತು ಹಣಕಾಸು ನಿಯಮಗಳ ಪಾಲನೆಯ ವಿವರಗಳನ್ನು ನೀಡುತ್ತದೆ.

# ಅಧ್ಯಾಯ ೧

# ರಾಜ್ಯ ಸರ್ಕಾರದ ಹಣಕಾಸಿನ ವ್ಯವಹಾರಗಳು

## 1.1 ಪೀಠಿಕೆ

ಈ ಅಧ್ಯಾಯವು ಪ್ರಸಕ್ತ ಸಾಲಿನಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ಹಣಕಾಸಿನ ವ್ಯವಹಾರಗಳ ಯಥಾದೃಷ್ಟಿಯ ಸ್ಥೂಲ ಚಿತ್ರಣವನ್ನು ನೀಡುತ್ತದೆ. ಅದು ಹಿಂದಿನ ವರ್ಷಗಳಿನ ಹಣಕಾಸಿನಲ್ಲಿನ ಪ್ರಮುಖ ಬದಲಾವಣೆಗಳನ್ನೂ ವಿಶ್ಲೇಷಿಸುತ್ತದೆ. ಈ ವಿಶ್ಲೇಷಣೆಯು ಹಣಕಾಸು ಲೆಕ್ಕಗಳು ಮತ್ತು ರಾಜ್ಯ ಸರ್ಕಾರದಿಂದ ಪಡೆದ ಮಾಹಿತಿಯನ್ನು ಆಧರಿಸಿದೆ.

## 1.2 ಹಣಕಾಸು ಲೆಕ್ಕಗಳು

ರಾಜ್ಯ ಸರ್ಕಾರದ ಹಣಕಾಸು ಲೆಕ್ಕಗಳನ್ನು ವಾರ್ಷಿಕವಾಗಿ ತಯಾರಿಸಲಾಗುತ್ತದೆ. ಲೆಕ್ಕಗಳು ಪ್ರಸಕ್ತ ವರ್ಷದ ಸ್ವೀಕೃತಿ ಮತ್ತು ಬಟವಾಡೆಗಳೊಂದಿಗೆ, ರಾಜಸ್ವ ಮತ್ತು ಬಂಡವಾಳ ಲೆಕ್ಕಗಳು ಹಾಗೂ ಸಾರ್ವಜನಿಕ ಲೆಕ್ಕಗಳು ಬಿಂಬಿಸುವ ಆರ್ಥಿಕ ಪರಿಣಾಮಗಳನ್ನು ನೀಡುತ್ತದೆ. ಸರ್ಕಾರದ ಆಸ್ತಿಗಳು ಮತ್ತು ಜವಾಬ್ದಾರಿಗಳನ್ನು ಲೆಕ್ಕಗಳಲ್ಲಿ ದಾಖಲಾಗಿರುವ ಶಿಲ್ಕುಗಳಿಂದ ಲೆಕ್ಕ ಹಾಕಲಾಗುತ್ತದೆ. ಇದು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಂದ ಪ್ರಮಾಣೀಕರಿಸಲಾಗುತ್ತದೆ.



## 1.3 ಸರ್ಕಾರಿ ಲೆಕ್ಕಗಳ ಸಂರಚನೆ/ಸ್ವರೂಪ

**ಭಾಗ I: ಸಂಚಿತ ನಿಧಿ**

ಸರ್ಕಾರದಿಂದ ಸ್ವೀಕೃತವಾದ ಎಲ್ಲ ರಾಜಸ್ವಗಳು, ಖಜಾನೆ ಬಿಲ್ಲುಗಳು, ಆಂತರಿಕ ಋಣಗಳಿಂದ ಸಾಲಗಳು, ಸಾಲ ಮರುಪಾವತಿಯಿಂದ ಸರ್ಕಾರವು ಪಡೆದ ಮೊತ್ತಗಳು ಮತ್ತು ಸರ್ಕಾರವು ಭರಿಸಿದ ಎಲ್ಲ ವೆಚ್ಚಗಳು ಸೇರಿದಂತೆ ಒಂದು ಸಂಚಿತ ನಿಧಿ. ಇದು ಭಾರತದ ಸಂವಿಧಾನದ ಕಲಂ 266(1)ರಡಿಯಲ್ಲಿ ಸ್ಥಾಪಿತವಾದ ಸಂಚಿತ ನಿಧಿ ಎನಿಸಿಕೊಳ್ಳುತ್ತದೆ.

**ಭಾಗ II: ಸಾದಿಲ್ವಾರು ನಿಧಿ**

ಸಂವಿಧಾನದ ಕಲಂ 267(2) ರ ಅಡಿಯಲ್ಲಿ ಸ್ಥಾಪಿತವಾದ ರಾಜ್ಯದ ಸಾದಿಲ್ವಾರು ನಿಧಿಯು ರಾಜ್ಯಪಾಲರ ವಿಲೇವಾರಿಗಾಗಿ ಇಟ್ಟಿರುವ ಒಂದು ಸ್ವಾದಿಲಾರು ಮೊತ್ತದ ರೂಪದಲ್ಲಿರುತ್ತದೆ. ಇದು ಅವರಿಗೆ ರಾಜ್ಯದ ಸಾದಿಲ್ವಾರು ವೆಚ್ಚ ನಿಧಿಯಿಂದ ಅನಿರೀಕ್ಷಿತ ವೆಚ್ಚಗಳನ್ನು ಶಾಸಕಾಂಗದಿಂದ ಅನುಮೋದಿಸಲು ಬಾಕಿ ಇರುವ ನಿಧಿಗಳನ್ನು ಸಂಬಂಧಿತ ಕ್ರಿಯಾತ್ಮಕ ಪ್ರಧಾನ ಶೀರ್ಷಿಕೆಗೆ ವೆಚ್ಚವನ್ನು ಹಾಕಲು ಸಹಾಯ ಮಾಡುತ್ತದೆ. ಸದರಿ ನಿಧಿಯಿಂದಾದ ವೆಚ್ಚವನ್ನು ಅದೇ ಆರ್ಥಿಕ ವರ್ಷದಲ್ಲಿ ಸಂಚಿತ ನಿಧಿಗೆ ವೆಚ್ಚ ತೋರುವ ಮೂಲಕ ಅಥವಾ ಮುಂದಿನ ಆರ್ಥಿಕ ವರ್ಷದಲ್ಲಿ ಹೊಸ ವೆಚ್ಚದ ಮೂಲಕ ಮರುಪೂರೈಕೆ ಮಾಡಲಾಗುತ್ತದೆ.

**ಭಾಗ III: ಸಾರ್ವಜನಿಕ ಲೆಕ್ಕ**

ಸಂಚಿತ ನಿಧಿಯ ಭಾಗವಾಗದ ಸಣ್ಣ ಉಳಿತಾಯಗಳು, ಭವಿಷ್ಯ ನಿಧಿಗಳು, ಠೇವಣಿಗಳು, ಮೀಸಲು ನಿಧಿಗಳು, ಅಮಾನತ್ತು, ಇರಸಾಲುಗಳು ಮುಂತಾದವುಗಳ ಜಮೆಗಳು ಮತ್ತು ಖರ್ಚುಗಳನ್ನು ಸಂವಿಧಾನದ ಅನುಚ್ಛೇದ 266(2)ರ ಅನ್ವಯ ಸ್ಥಾಪಿಸಲಾದ 'ಸಾರ್ವಜನಿಕ ಲೆಕ್ಕ'ದಲ್ಲಿ ಇಡಲಾಗುತ್ತದೆ ಮತ್ತು ರಾಜ್ಯ ವಿಧಾನ ಮಂಡಲದ ಅನುಮೋದನೆಗೆ ಒಳಪಟ್ಟಿರುವುದಿಲ್ಲ.

## 1.4 ವಿತ್ತ ವ್ಯವಹಾರಗಳು

ರಾಜ್ಯ ಸರ್ಕಾರದ ವಿತ್ತ ವ್ಯವಹಾರಗಳು ವರ್ಷದಲ್ಲಿನ ರಾಜಸ್ವ ಮತ್ತು ಬಂಡವಾಳ ಶೀರ್ಷಿಕೆಯಡಿ ಸ್ವೀಕೃತಿ ಮತ್ತು ಬಟವಾಡೆಗಳನ್ನು ಹೊಂದಿರುತ್ತದೆ. ಸ್ವೀಕೃತಿಗಳ ಮತ್ತು ಬಟವಾಡೆಗಳ ಒಟ್ಟಾರೆ ಸಾರಾಂಶವನ್ನು ಕೆಳಗೆ ನೀಡಲಾಗಿದೆ.

(ಕೋಟಿ ರೂಪಾಯಿಗಳಲ್ಲಿ)

| ಸ್ವೀಕೃತಿಗಳು | | | | ಬಟವಾಡೆಗಳು | | | |
|---|---|---|---|---|---|---|---|
| | 2015-16 | 2016-17 | ವೃದ್ಧಿ % | | 2015-16 | 2016-17 | ವೃದ್ಧಿ % |
| ಭಾಗ–ಎ ರಾಜಸ್ವ | | | | | | | |
| ರಾಜಸ್ವ ಸ್ವೀಕೃತಿಗಳು | 1,18,817.31 | 1,33,213.79 | 12 | ರಾಜಸ್ವ ವೆಚ್ಚ | 1,17,028.58 | 1,31,920.75 | 13 |
| ತೆರಿಗೆ ಆದಾಯ | 75,550.18 | 82,956.13 | 10 | ಸಾಮಾನ್ಯ ಸೇವೆಗಳು | 30,799.28 | 31,264.56 | 2 |
| ತೆರಿಗೆಯೇತರ ರಾಜಸ್ವ | 5,355.04 | 5,794.53 | 8 | ಸಾಮಾಜಿಕ ಸೇವೆಗಳು | 46,307.08 | 54,549.24 | 18 |
| ಕೇಂದ್ರ ತೆರಿಗೆಗಳು /ಸುಂಕಗಳಲ್ಲಿನ ಪಾಲು | 23,983.34 | 28,759.94 | 20 | ಆರ್ಥಿಕ ಸೇವೆಗಳು | 33,846.17 | 40,421.37 | 19 |
| ಭಾರತ ಸರ್ಕಾರದಿಂದ ಪಡೆದ ಸಹಾಯಾನು ದಾನಗಳು ಮತ್ತು ವಂತಿಗೆಗಳು | 13,928.75 | 15,703.19 | 13 | ಸಹಾಯಾನು ದಾನಗಳು ಮತ್ತು ವಂತಿಗೆಗಳು | 6,076.05 | 5,685.58 | (-) 6 |
| ಭಾಗ–ಬಿ ಬಂಡವಾಳ ಮತ್ತು ಇತರೆ | | | | | | | |
| ಇತರೆ ಬಂಡವಾಳ ಸ್ವೀಕೃತಿಗಳು | 352.30 | 26.96 | (-) 92 | ಬಂಡವಾಳ ವೆಚ್ಚ | 20,713.03 | 28,150.43 | 36 |
| | | | | ಸಾಮಾನ್ಯ ಸೇವೆಗಳು | 991.41 | 1,060.39 | 7 |
| | | | | ಸಾಮಾಜಿಕ ಸೇವೆಗಳು | 5,313.91 | 6,896.84 | 30 |
| | | | | ಆರ್ಥಿಕ ಸೇವೆಗಳು | 14,407.71 | 20,193.20 | 40 |
| ಸಾಲಗಳ ಮತ್ತು ಮುಂಗಡಗಳ ವಸೂಲಿಗಳು | 59.68 | 99.84 | 67 | ಸಾಲಗಳ ಮತ್ತು ಮುಂಗಡಗಳ ಬಟವಾಡೆ | 656.41 | 1,934.38 | 195 |
| ಸಾರ್ವಜನಿಕ ಋಣ ಸ್ವೀಕೃತಿಗಳು* | 21,072.23 | 31,155.92 | 48 | ಸಾರ್ವಜನಿಕ ಋಣ ಮರುಪಾವತಿ* | 4,110.20 | 7,420.24 | 81 |
| ಸಾದಿಲ್ವಾರು ನಿಧಿ | - | - | - | ಸಾದಿಲ್ವಾರು ನಿಧಿ | - | - | - |
| ಸಾರ್ವಜನಿಕ ಲೆಕ್ಕ ಸ್ವೀಕೃತಿಗಳು | 1,60,518.76 | 1,79,318.45 | 12 | ಸಾರ್ವಜನಿಕ ಲೆಕ್ಕ ಬಟವಾಡೆಗಳು | 1,55,094.83 | 1,67,153.81 | 8 |
| ಪ್ರಾರಂಭಿಕ ನಗದು ಶಿಲ್ಕು | 23,900.90 | 27,118.23 | 13 | ಅಂತಿಮ ನಗದು ಶಿಲ್ಕು | 27,118.23 | 34,353.58 | 27 |
| ಒಟ್ಟು | 3,24,721.28 | 3,70,933.19 | 14 | ಒಟ್ಟು | 3,24,721.28 | 3,70,933.19 | 14 |

ಆಕರ: ಹಣಕಾಸು ಲೆಕ್ಕಗಳು 2016–17.


* ಅರ್ಥೋಪಾಯ ಮುಂಗಡಗಳು ಮತ್ತು ಓವರ್‌ಡ್ರಾಫ್ಟ್‌ಗಳ ನಿವ್ವಳ ವ್ಯವಹಾರಗಳನ್ನು ಹೊರತುಪಡಿಸಿ.

- ರಾಜಸ್ವ ಸ್ವೀಕೃತಿಗಳ ವೃದ್ಧಿಯ ದರದಲ್ಲಿನ ಶೇಕಡ 12ರಷ್ಟು ಹೆಚ್ಚಾಗಿರುವುದು ಸ್ವಂತ ತೆರಿಗೆ ರಾಜಸ್ವ (ಶೇಕಡ 10) ತೆರಿಗೆಯೇತರ ರಾಜಸ್ವ (ಶೇಕಡ 8), ಕೇಂದ್ರ ಸರ್ಕಾರದ ತೆರಿಗೆಗಳು/ಸುಂಕಗಳ ಪಾಲು (ಶೇಕಡ 20) ಮತ್ತು ಭಾರತ ಸರ್ಕಾರದಿಂದ ಸಹಾಯಾನುದಾನಗಳು ಮತ್ತು ವಂತಿಗೆಗಳು (ಶೇಕಡ 13) ಇವುಗಳ ಹೆಚ್ಚಳದಿಂದಾಗಿದೆ.
- ರಾಜಸ್ವ ವೆಚ್ಚದಲ್ಲಿನ ಶೇಕಡ 13ರ ಸ್ವೀಕೃತಿಯ ಹೆಚ್ಚಳವು ಆರ್ಥಿಕ ಸೇವೆಗಳ (ಶೇಕಡ 19) ಸಾಮಾಜಿಕ ಸೇವೆಗಳ (ಶೇಕಡ 18) ಮತ್ತು ಸಾಮಾನ್ಯ ಸೇವೆಗಳ (ಶೇಕಡ 2) ಅಡಿಯಲ್ಲಿದ್ದವು.
- ಬಂಡವಾಳ ವೆಚ್ಚವು ಶೇಕಡ 36ರಷ್ಟು ಹೆಚ್ಚಾಯಿತು.
- ಸಾರ್ವಜನಿಕ ಲೆಕ್ಕ ಸ್ವೀಕೃತಿಗಳು ಶೇಕಡ 48ರಷ್ಟು ಹೆಚ್ಚಾಗಿದ್ದು ಸಾರ್ವಜನಿಕ ಋಣಗಳ ಮರುಪಾವತಿಯು ಶೇಕಡ 81ರಷ್ಟು ಹೆಚ್ಚಾಯಿತು.

**(ಕಂಡಿಕೆ 1.1.1)**

## 1.5 ರಾಜ್ಯದಲ್ಲಿ ವಿತ್ತೀಯ ಸುಧಾರಣಾ ಪಥ

- ಕರ್ನಾಟಕವು ಏಪ್ರಿಲ್ 2003ರಿಂದ ಜಾರಿಗೊಂಡ ಕರ್ನಾಟಕ ವಿತ್ತೀಯ ಜವಾಬ್ದಾರಿ ಅಧಿನಿಯಮ (ಕೆಎಫ್ಆರ್ಎ) 2002ನ್ನು ಜಾರಿ ಮಾಡಿದ ಮೊದಲ ರಾಜ್ಯವಾಗಿದೆ (ಸೆಪ್ಟಂಬರ್ 2002).
- ಕೆಎಫ್ಆರ್ಎ ಜಾರಿ ಮಾಡಿದಾಗಿನಿಂದ ರಾಜ್ಯ ಸರ್ಕಾರವು ವಿತ್ತೀಯ ಕ್ರೋಢೀಕರಣ ಪಥದಲ್ಲಿದ್ದು ಕರ್ನಾಟಕ ಖಾತರಿಗಳ ಮೇಲಿನ ಮಿತಿ ಕಾಯಿದೆ 1999ರಡಿ ವಿಧಿಸಲಾದ ಮಿತಿಗಳೊಳಗೆ ಖಾತರಿಗಳನ್ನು ನಿರ್ವಹಿಸಿತು.



- ಫೆಬ್ರವರಿ 2014ರಲ್ಲಿ ಕಾಯಿದೆಗೆ ತಿದ್ದುಪಡಿ ತರುವುದರ ಮೂಲಕ ಪರಿಚ್ಛೇದ 2(ಜಿ) ಅಡಿಯಲ್ಲಿ ಸೂಚಿಸಿರುವ ಸಾರ್ವಜನಿಕ ವಿಭಾಗದ ಉದ್ದಿಮೆಗಳು ಮತ್ತು ವಿಶೇಷ ಉದ್ದೇಶ ಸಾಧನಗಳು ಮತ್ತು ಇತರ ಸಮಾನ ಸಾಧನಗಳು ಮಾಡುವ ಸಾಲಗಳ ಅಸಲು ಮತ್ತು ಬಡ್ಡಿಗಳ ಒಟ್ಟು ಜವಾಬ್ದಾರಿಗಳ ವ್ಯಾಪ್ತಿಯನ್ನು ರಾಜ್ಯದ ಆಯವ್ಯಯದ ಮೂಲಕವೇ ಭರಿಸುವಂತೆ ಹಿಗ್ಗಿಸಲಾಯಿತು.
- 2016–17ರಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ (₹11,17,334 ಕೋಟಿ) ಬಾಕಿಯಿರುವ ಋಣಗಳ (ಆಯವ್ಯಯದ ಹೊರಗಿನ ಸಾಲಗಳೂ ಸೇರಿದಂತೆ) ಮತ್ತು ವಿತ್ತೀಯ ಕೊರತೆಯ ಅನುಪಾತವೂ ಕ್ರಮವಾಗಿ ಶೇಕಡ 19.81 ಮತ್ತು ಶೇಕಡ 2.57 ರಷ್ಟಿದ್ದು, ಕೆಎಫ್‌ಆರ್‌ಎ ವಿಧಿಸಿದ ಶೇಕಡ 25 ಮತ್ತು ಶೇಕಡ 3ರ ಮಿತಿಯೊಳಗಿದ್ದವು.
- 2014–15ರ ಸಾಲಿನ ಜಿಲ್ಲಾ ಪಂಚಾಯತ್ ನಿಧಿ–2 ಮತ್ತು ತಾಲ್ಲೂಕು ಪಂಚಾಯತ್ ನಿಧಿ–2 ಶಿಲ್ಕುಗಳ ಹಿಂಬರೆಯುವಿಕೆಯಿಂದ ₹1,086.28 ಕೋಟಿಗಳಷ್ಟು ರಾಜಸ್ವ ಹೆಚ್ಚಳದ ಸಂಕುಚನವಾಯಿತು ಮತ್ತು ನೀರು ಸರಬರಾಜು ಯೋಜನೆಯ ಬಳಕೆಯಾಗದ ₹612.04 ಕೋಟಿಗಳಷ್ಟು ಅನುದಾನಗಳನ್ನು ಕ್ರೋಢೀಕೃತ ನಿಧಿಗೆ ಜಮೆ ಮಾಡುವ ಮೂಲಕ ಹೊಂದಾಣಿಕೆ ಮಾಡಲಾಯಿತು.
- ಸಾರ್ವಜನಿಕ ಲೆಕ್ಕಗಳಡಿ ವೆಚ್ಚ (₹1,012.43 ಕೋಟಿ) ನಿರ್ವಹಿಸುವ ಮೂಲಭೂತ ಸೌಕರ್ಯ ಉಪಕ್ರಮಣ ನಿಧಿ (₹542.36 ಕೋಟಿ), ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ (₹266.43 ಕೋಟಿ), ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ನಿಧಿ (₹142.74 ಕೋಟಿ) ಮತ್ತು ರಾಜ್ಯ ನಗರ ಸಾರಿಗೆ ನಿಧಿ (₹60.90 ಕೋಟಿ) ಯಷ್ಟು ವೆಚ್ಚವನ್ನು ಹೊಂದಾಣಿಕೆ ಮಾಡಲಿಲ್ಲ.

**(ಕಂಡಿಕೆ 1.1.2)**

## 1.6 ಮಹಿಳಾ ಉದ್ದೇಶಿತ ಆಯವ್ಯಯ

ರಾಜ್ಯದ ಮಹಿಳಾ ಉದ್ದೇಶಿತ ಆಯವ್ಯಯವು ಸಮಗ್ರ ಆಯವ್ಯಯದೊಳಗೆ ಮಹಿಳೆಯರಿಗಾಗಿ ಪೂರ್ಣವಾದ ಅಥವಾ ಭಾಗಶಃ ಸೌಲಭ್ಯ ದೊರಕಿಸಿಕೊಡಲು ರೂಪಿಸಿದ ಕಾರ್ಯಕ್ರಮಗಳ ವೆಚ್ಚದ ಪ್ರಸ್ತಾವನೆಯನ್ನು ಸೂಚಿಸುತ್ತದೆ. ಎರಡು ಯೋಜನೆಗಳ ಅಧ್ಯಯನವು ಈ ಕೆಳಗಿನದನ್ನು ಬಹಿರಂಗಪಡಿಸಿತು:

### 1.6.1 ಅಂಗನವಾಡಿ ಕಾರ್ಯಕರ್ತೆಯರು/ಸಹಾಯಕರಿಗೆ ಪಿಂಚಣಿ–ಎನ್‌ಪಿಎಸ್ ಲೈಟ್/ ಸ್ವಾವಲಂಬನ್/ಅಟಲ್ ಪಿಂಚಣಿ ಯೋಜನೆ

1 ಏಪ್ರಿಲ್ 2015ರಿಂದ ಎನ್‌ಪಿಎಸ್ ಲೈಟ್ ಯೋಜನೆಯಡಿ ಹೊಸ ನೋಂದಣಿಯನ್ನು ನಿಲ್ಲಿಸುವ ನಿರ್ಧಾರವು 5,925 ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕರನ್ನು ಮತ್ತು ಹೊಸದಾಗಿ ನೇಮಕಗೊಂಡ ಕಾರ್ಯಕರ್ತೆಯರು, ಸಹಾಯಕರನ್ನು ಪಿಂಚಣಿ ಯೋಜನೆಯ ಲಾಭದಿಂದ ವಂಚಿಸಿತು.

### 1.6.2 ಮಹಿಳಾ ವಾಣಿಜ್ಯೋದ್ಯಮಿಗಳಿಗೆ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ತರಬೇತಿ

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮಕ್ಕೆ ಆಡಳಿತಾತ್ಮಕ ಇಲಾಖೆಯಿಂದ ಹಿಂದಿನ ಅನುದಾನಗಳ ಬಳಕೆಯನ್ನು ಖಚಿತಪಡಿಸಿಕೊಳ್ಳದೇ ಬಿಡುಗಡೆಯಾದ ಅನುದಾನವು ₹12.92 ಕೋಟಿಗಳಷ್ಟು ಸರ್ಕಾರಿ ಹಣವು ಬ್ಯಾಂಕುಗಳಲ್ಲಿ ಅನಗತ್ಯ ತಡೆಯಾಗುವಲ್ಲಿ ಪರಿಣಮಿಸಿತು.

(ಕಂಡಿಕೆ 1.1.5)

## 1.7 2016–17ರ ಸಾಲಿನ ಆಯವ್ಯಯದ ಪ್ರಮುಖ ಕಾರ್ಯನೀತಿ ಉಪಕ್ರಮಣಗಳು

ಪರಿಶಿಷ್ಟ ಜಾತಿ ಉಪಯೋಜನೆ/ಗಿರಿಜನ ಉಪಯೋಜನೆಯಡಿಯಲ್ಲಿ ವಿವಿಧ ಅಭಿವೃದ್ಧಿ ಇಲಾಖೆಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರ ಅಭಿವೃದ್ಧಿಗಾಗಿ ಅನುಷ್ಠಾನಗೊಳಿಸುವ ವಿವಿಧ ಯೋಜನೆಗಳ ಪ್ರಯೋಜನವು ಉದ್ದೇಶಿತ ಜನರಿಗೆ ತಲುಪುವುದನ್ನು ಮೇಲ್ವಿಚಾರಿಸುವ ಮತ್ತು ಖಚಿತಪಡಿಸಿಕೊಳ್ಳುವ ಸೋಷಿಯಲ್ ಆಡಿಟ್ ಕೋಶವನ್ನು ಸಮಾಜ ಕಲ್ಯಾಣ ಇಲಾಖೆಯಲ್ಲಿ ಸ್ಥಾಪಿಸಿರಲಿಲ್ಲ.

(ಕಂಡಿಕೆ 1.1.6)




## 1.8 ರಾಜ್ಯದ ಸಂಪನ್ಮೂಲಗಳು

ವಾರ್ಷಿಕ ಹಣಕಾಸು ಲೆಕ್ಕಗಳನ್ವಯ ರಾಜ್ಯದ ಸಂಪನ್ಮೂಲಗಳನ್ನು ಕೆಳಗಿನ ನಕ್ಷೆಯಲ್ಲಿ ನೀಡಲಾಗಿದೆ.



- 2016–17ರಲ್ಲಿ ರಾಜ್ಯದ ಒಟ್ಟು ಸ್ವೀಕೃತಿಗಳು ₹1,76,661 ಕೋಟಿಗಳಷ್ಟಿದ್ದವು.
- ₹1,33,214 ಕೋಟಿಗಳ ರಾಜಸ್ವ ಸ್ವೀಕೃತಿಯು ತೆರಿಗೆ ಆದಾಯ (₹82,956 ಕೋಟಿ), ತೆರಿಗೆಯೇತರ ರಾಜಸ್ವ (₹5,795 ಕೋಟಿ), ಕೇಂದ್ರ ತೆರಿಗೆ ಮತ್ತು ಸುಂಕದಲ್ಲಿ ರಾಜ್ಯದ ಪಾಲು (₹28,760 ಕೋಟಿ) ಮತ್ತು ಭಾರತ ಸರ್ಕಾರದಿಂದ ಸಹಾಯಾನುದಾನ (₹15,703 ಕೋಟಿ)ಗಳನ್ನು ಒಳಗೊಂಡಿತ್ತು.
- ಬಂಡವಾಳ ಸ್ವೀಕೃತಿಗಳು, ಋಣಸ್ವೀಕೃತಿಗಳು (₹31,156 ಕೋಟಿ) ಮತ್ತು ಋಣೇತರ ಸ್ವೀಕೃತಿಗಳನ್ನು (₹127 ಕೋಟಿ) ಒಳಗೊಂಡಿದೆ.
- 2016–17ರಲ್ಲಿ ಸರ್ಕಾರಕ್ಕೆ ಬಳಕೆಗೆ ಲಭ್ಯವಿರುವ ನಿವ್ವಳ ಸಾರ್ವಜನಿಕ ಲೆಕ್ಕ ಸ್ವೀಕೃತಿಯು ₹12,164 ಕೋಟಿಗಳಷ್ಟಿತ್ತು.
- ಸಾರ್ವಜನಿಕ ಲೆಕ್ಕ ಸ್ವೀಕೃತಿಗಳು, ಸಣ್ಣ ಉಳಿತಾಯ ಭವಿಷ್ಯ ನಿಧಿ, ಠೇವಣಿಗಳು ಮತ್ತು ಮುಂಗಡಗಳು, ಅಮಾನತ್ತು ಮತ್ತಿತರ ಶಿಲ್ಕುಗಳು ಮತ್ತು ಜಮೆಗಳನ್ನು ಒಳಗೊಳ್ಳುತ್ತದೆ.

2016–17ರ ಸಾಲಿನಲ್ಲಿ ರಾಜ್ಯದಲ್ಲಿದ ರಾಜಸ್ವಗಳ ಸಂಯೋಜನೆಯನ್ನು ಈ ಕೆಳಗಿನ ನಕ್ಷೆಯಲ್ಲಿ ಬಿಂಬಿಸಲಾಗಿದೆ.



- ಸಾರ್ವಜನಿಕ ಹಣಕ್ಕೆ ಸರ್ಕಾರವು ಬ್ಯಾಂಕರ್ ಟ್ರಸ್ಟಿಯಾಗಿ ಕಾರ್ಯ ನಿರ್ವಹಿಸುತ್ತಿರುವಂತಹ ಸ್ವೀಕೃತಿಗಳು ಸಾರ್ವಜನಿಕ ಲೆಕ್ಕ ಸ್ವೀಕೃತಿಗಳೆನಿಸುತ್ತವೆ. ಅದು ಒಟ್ಟು ಸ್ವೀಕೃತಿಗಳ ಶೇಕಡ 7ರಷ್ಟಿತ್ತು.
- 2016-17ರಲ್ಲಿ ಒಟ್ಟು ಸ್ವೀಕೃತಿಗಳಲ್ಲಿ ರಾಜಸ್ವ ಸ್ವೀಕೃತಿಯ ಪಾಲು ಶೇಕಡ 75ರಷ್ಟಿತ್ತು (₹1,33,214 ಕೋಟಿ).
- ಬಂಡವಾಳ ಸ್ವೀಕೃತಿಗಳು ಒಟ್ಟು ಸ್ವೀಕೃತಿಗಳ ಶೇಕಡ 18ರಷ್ಟಿತ್ತು (₹31,283 ಕೋಟಿ).

**(ಕಂಡಿಕೆ 1.2.1)**

## 1.9 ರಾಜ್ಯದಲ್ಲಿನ ಅನುಷ್ಠಾನಗೊಳಿಸುವ ಏಜೆನ್ಸಿಗಳಿಗೆ ಕೇಂದ್ರ ಯೋಜನೆ ನಿಧಿಗಳ ನೇರ ವರ್ಗಾವಣೆ

ಭಾರತ ಸರ್ಕಾರದಿಂದ ಅನುಷ್ಠಾನಗೊಳಿಸುವ ಏಜೆನ್ಸಿಗಳಿಗೆ ಯೋಜನಾ ನಿಧಿಗಳ ನೇರ ವರ್ಗಾವಣೆಯ ಪದ್ಧತಿಯನ್ನು 2014-15ರಿಂದ ನಿಲ್ಲಿಸಲಾಗಿತ್ತು. ಆದಾಗ್ಯೂ, 2016-17ರಲ್ಲಿ ಈ ಪದ್ಧತಿಯ ಮಾರ್ಗಪಲ್ಲಟವಾಗಿ ₹98.61 ಕೋಟಿಗಳ ಕೇಂದ್ರ ಯೋಜನಾ ನಿಧಿಯನ್ನು ನೇರವಾಗಿ ರಾಜ್ಯದ ಅನುಷ್ಠಾನಗೊಳಿಸುವ ಏಜೆನ್ಸಿಗಳಿಗೆ ವರ್ಗಾಯಿಸಲಾಯಿತು.


**(ಕಂಡಿಕೆ 1.2.2)**

## 1.10 ರಾಜ್ಯದ ಸ್ವಂತ ಸಂಪನ್ಮೂಲಗಳು

### 1.10.1 ತೆರಿಗೆ ಆದಾಯ

ಈ ವರ್ಷದಲ್ಲಿ ರಾಜ್ಯದ ತೆರಿಗೆ ಆದಾಯದಲ್ಲಿ ಮಾರಾಟಗಳು, ವಾಣಿಜ್ಯ ಇತ್ಯಾದಿಗಳ ಮೇಲಿನ ತೆರಿಗೆಗಳು ಪ್ರಮುಖ ಮೂಲವಾಗಿದ್ದು (ಶೇಕಡ 56), ರಾಜ್ಯ ಅಬಕಾರಿ (ಶೇಕಡ 20), ಮುದ್ರಾಂಕ ಮತ್ತು ನೋಂದಣಿ ಶುಲ್ಕ (ಶೇಕಡ 9) ಹಾಗೂ ವಾಹನಗಳ ಮೇಲಿನ ತೆರಿಗೆಗಳು (ಶೇಕಡ 7) ನಂತರದ ಸ್ಥಾನದಲ್ಲಿದ್ದವು.

**(ಕಂಡಿಕೆ 1.3.1.1)**




### 1.10.2 ತೆರಿಗೆಯೇತರ ಆದಾಯ

- ರಾಜಸ್ವ ಸ್ವೀಕೃತಿಗಳಿಗೆ ತೆರಿಗೆಯೇತರ ಆದಾಯದ ಅನುಪಾತವು 2012–13ರಲ್ಲಿ ಶೇಕಡ 5.07ರಷ್ಟಿದ್ದು 2016–17ರಲ್ಲಿ ಶೇಕಡ 4.35ಕ್ಕೆ ಇಳಿಯಿತು.
- ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ (₹11,17,334 ಕೋಟಿ) ಅದರ ಅನುಪಾತವು ನಗಣ್ಯವಾಗಿದ್ದು ವೆಚ್ಚ ಸುಧಾರಣಾ ಆಯೋಗದ ಶಿಫಾರಸ್ಸಿನಂತೆ ಮುಂಬರುವ ವರ್ಷಗಳಲ್ಲಿ ಬಳಕೆದಾರ ಶುಲ್ಕವನ್ನು ಪರಿಷ್ಕರಿಸುವ ಮೂಲಕ ತೆರಿತೆಯೇತರ ಆದಾಯವನ್ನು ಸಂಗ್ರಹಿಸುವ ಅಗತ್ಯತೆಯನ್ನು ಸೂಚಿಸುತ್ತದೆ.

(ಕಂಡಿಕೆ 1.3.1.2)

### 1.11 ಕೇಂದ್ರ ತೆರಿಗೆ ವರ್ಗಾವಣೆಗಳು

2016–17ರಲ್ಲಿ ಕೇಂದ್ರ ತೆರಿಗೆ ವರ್ಗಾವಣೆಯ ಸಂಯೋಜನೆಯನ್ನು ಕೆಳಗಿನ ನಕ್ಷೆಯಲ್ಲಿ ತೋರಿಸಲಾಗಿದೆ.




- ಭಾರತ ಸರ್ಕಾರವು ರಾಜ್ಯ ಸರ್ಕಾರದ ಪಾಲನ್ನು ಕೇಂದ್ರ ತೆರಿಗೆ ಮತ್ತು ಸುಂಕಗಳಲ್ಲಿ ವರ್ಗಾವಣೆ ಮಾಡುತ್ತದೆ.
- 2016–17ರಲ್ಲಿ ₹28,760 ಕೋಟಿಗಳನ್ನು ಕೇಂದ್ರ ತೆರಿಗೆ ವರ್ಗಾವಣೆಯೆಂದು ಸ್ವೀಕರಿಸಲಾಗಿದ್ದು ಅದು ಹಿಂದಿನ ವರ್ಷಕ್ಕಿಂತ ₹4,777 ಕೋಟಿಗಳಷ್ಟು ಹೆಚ್ಚಾಗಿತ್ತು.

- ಸದರಿ ಹೆಚ್ಚಳವು ಪ್ರಮುಖವಾಗಿ ಕಾರ್ಪೊರೇಶನ್ ತೆರಿಗೆ (₹1,663 ಕೋಟಿ), ಕೇಂದ್ರ ಅಬಕಾರಿ ಸುಂಕ (₹1,343 ಕೋಟಿ), ಕಾರ್ಪೊರೇಶನ್ ತೆರಿಗೆ ಹೊರತುಪಡಿಸಿ ಆದಾಯ ತೆರಿಗೆ (₹1,149 ಕೋಟಿ) ಮತ್ತು ಸೇವಾ ತೆರಿಗೆ (₹486 ಕೋಟಿ) ಗಳಡಿಯಲ್ಲಿದ್ದವು.

**(ಕಂಡಿಕೆ 1.3.3)**

## 1.12 ಹದಿನಾಲ್ಕನೇ ಹಣಕಾಸು ಆಯೋಗದ ಅನುದಾನಗಳ ಸಮರ್ಪಕ ಬಳಕೆ

- ರಾಜ್ಯ ಸರ್ಕಾರವು ಯಥೋಚಿತವಾಗಿ ಸ್ಥಾಪನೆಗೊಂಡ ಸಂಸ್ಥೆಗಳಿಲ್ಲದ ಕಾರಣ ಪಂಚಾಯತ್ ರಾಜ್ ಸಂಸ್ಥೆಗಳಿಗೆ ₹20.41 ಕೋಟಿಗಳಷ್ಟು ಕಾರ್ಯನಿರ್ವಹಣಾ ಅನುದಾನವನ್ನು ಮತ್ತು ಅವಾರ್ಡ್ ಅವಧಿಯ ಎರಡನೇ ವರ್ಷದಲ್ಲಿ (2016–17) ಜಿಎಸ್‌ಟಿಯು ಅನುಷ್ಠಾನಗೊಳ್ಳದ ಕಾರಣ ₹43.50 ಕೋಟಿಗಳ ವಿಪತ್ತು ಪರಿಹಾರವನ್ನು ಸ್ವೀಕರಿಸಲಿಲ್ಲ.
- ಸಂವಿಧಾನವು ತಿದ್ದುಪಡಿಯಾಗದ ಕಾರಣ, ವೃತ್ತಿ, ವ್ಯಾಪಾರ, ಕಸುಬು ಮತ್ತು ಉದ್ಯೋಗಗಳ ತೆರಿಗೆಗಳ ಮೇಲಿನ ಹೆಚ್ಚಳಕ್ಕೆ ಸಂಬಂಧಿಸಿದ ಹದಿನಾಲ್ಕನೇ ಹಣಕಾಸು ಆಯೋಗದ ಶಿಫಾರಸ್ಸನ್ನು ಜಾರಿ ಮಾಡಿರಲಿಲ್ಲ.
- ಜಲ ನಿಯಂತ್ರಣ ಪ್ರಾಧಿಕಾರ, ವಿದ್ಯುತ್ ನಿಯಂತ್ರಣ ಆಯೋಗ ನಿಧಿ ಮತ್ತು ರಸ್ತೆ ಸಾರಿಗೆಗೆ ಸ್ವತಂತ್ರ ನಿಯಂತ್ರಕದ ಸ್ಥಾಪನೆಗೆ ಸಂಬಂಧಿಸಿದ ಹದಿನಾಲ್ಕನೇ ಹಣಕಾಸು ಆಯೋಗದ ಶಿಫಾರಸ್ಸುಗಳನ್ನು ರಾಜ್ಯ ಸರ್ಕಾರವು ಅನುಷ್ಠಾನಗೊಳಿಸಿರಲಿಲ್ಲ.

**(ಕಂಡಿಕೆ 1.3.4.3)**




## 1.13 ರಾಜಸ್ವ ವೆಚ್ಚ

2016–17ರಲ್ಲಿ ರಾಜಸ್ವ ವೆಚ್ಚವು (₹1,31,921 ಕೋಟಿ) ಒಟ್ಟು ವೆಚ್ಚದ (₹1,62,005 ಕೋಟಿ) ಶೇಕಡ 81ರಷ್ಟಿತ್ತು. ರಾಜಸ್ವ ವೆಚ್ಚದ ಶೇಕಡ 80ರಷ್ಟು ಸಂಬಳ, ಪಿಂಚಣಿ, ಬಡ್ಡಿ ಪಾವತಿಗಳು, ಸಹಾಯಧನಗಳು, ಆಡಳಿತಾತ್ಮಕ ವೆಚ್ಚಗಳು, ಸಹಾಯಾನುದಾನ ಮತ್ತು ಆರ್ಥಿಕ ನೆರವು ಹಾಗೂ ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆಗಳನ್ನು ಒಳಗೊಂಡಿತ್ತು

(ಕಂಡಿಕೆ 1.6.2)

### 1.13.1 ಬದ್ಧ ವೆಚ್ಚಗಳು

- ಬದ್ಧ ವೆಚ್ಚಗಳು ರಾಜಸ್ವ ಸ್ವೀಕೃತಿಗಳ ಶೇಕಡ 79ರಷ್ಟನ್ನು ಬಳಸಿಕೊಂಡಿದ್ದವು.
- 2016–17ರಲ್ಲಿ ಸಂಬಳದ ಮೇಲಿನ ವೆಚ್ಚವು ₹21,708 ಕೋಟಿಗಳಷ್ಟಿದ್ದವು.
- ವಿಶ್ರಾಂತಿ ವೇತನ ಪಾವತಿಗಳ ಮೇಲಿನ ವೆಚ್ಚವು ₹11,295 ಕೋಟಿಗಳಷ್ಟಿದ್ದು, ಹಿಂದಿನ ವರ್ಷಕ್ಕಿಂತ ₹44 ಕೋಟಿಗಳ ಹೆಚ್ಚಳವಾಗಿತ್ತು (₹11,251 ಕೋಟಿ).
- ಬಡ್ಡಿ ಪಾವತಿಗಳು (₹12,850 ಕೋಟಿ) ಮುಖ್ಯವಾಗಿ ಆಂತರಿಕ ಋಣದ ಮೇಲಿನ ಬಡ್ಡಿ (₹9,578 ಕೋಟಿ), ಸಣ್ಣ ಉಳಿತಾಯಗಳ ಮತ್ತು ಭವಿಷ್ಯನಿಧಿಗಳ ಮೇಲಿನ ಬಡ್ಡಿ (₹1,904 ಕೋಟಿ), ಕೇಂದ್ರ ಸರ್ಕಾರದ ಸಾಲಗಳು ಮತ್ತು ಮುಂಗಡಗಳ ಮೇಲಿನ ಬಡ್ಡಿ (₹548 ಕೋಟಿ) ಮತ್ತು ಆಯವ್ಯಯದ ಹೊರಗಿನ ಸಾಲಗಳ ಮೇಲಿನ ಬಡ್ಡಿ (₹817 ಕೋಟಿ) ಇವುಗಳನ್ನು ಒಳಗೊಂಡಿದ್ದವು.
- 2016–17ರಲ್ಲಿ ನೇರ ಸಹಾಯಧನಗಳ ಮೇಲಿನ ವೆಚ್ಚವು ₹14,387 ಕೋಟಿಗಳಷ್ಟಿದ್ದು ಹಿಂದಿನ ವರ್ಷಕ್ಕಿಂತ (₹13,149 ಕೋಟಿ) ಶೇಕಡ 9ರಷ್ಟು ಹೆಚ್ಚಾಗಿತ್ತು.



- 2016–17ರಲ್ಲಿ ಪರೋಕ್ಷ ಸಹಾಯಧನದ ಮೇಲಿನ ವೆಚ್ಚವು ₹3,913 ಕೋಟಿಗಳಷ್ಟಿತ್ತು.
- ಸಾಮಾಜಿಕ ಭದ್ರತಾ ಪಿಂಚಣಿಗಳ ಮೇಲಿನ ವೆಚ್ಚವು ₹2,504 ಕೋಟಿಗಳಷ್ಟಿದ್ದು ಹಿಂದಿನ ವರ್ಷಕ್ಕಿಂತ (₹2,247 ಕೋಟಿ) ₹257 ಕೋಟಿಗಳಷ್ಟು ಹೆಚ್ಚಾಗಿದ್ದವು.
- 2016–17ರಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆಯು ₹23,466 ಕೋಟಿಗಳಷ್ಟಿದ್ದವು.

**(ಕಂಡಿಕೆ 1.6.3)**

### 1.13.2 ವೆಚ್ಚದ ಗುಣಮಟ್ಟ

- ರಾಜ್ಯದಲ್ಲಿನ ಉತ್ತಮ ಸಾಮಾಜಿಕ ಮತ್ತು ಭೌತಿಕ ಮೂಲಭೂತ ಸೌಕರ್ಯಗಳ ಲಭ್ಯತೆಯು ಸಾಮಾನ್ಯವಾಗಿ ಅದರ ವೆಚ್ಚದ ಗುಣಮಟ್ಟವನ್ನು ಪ್ರತಿಬಿಂಬಿಸುತ್ತದೆ. 2016–17ರಲ್ಲಿ ರಾಜ್ಯ ಸರ್ಕಾರವು ಅಭಿವೃದ್ಧಿ ವೆಚ್ಚಕ್ಕೆ ಸಾಕಷ್ಟು ಆದ್ಯತೆಯನ್ನು ನೀಡಿದ್ದು, ಸಾಮಾನ್ಯ ವರ್ಗದ ರಾಜ್ಯಗಳ ಒಟ್ಟು ವೆಚ್ಚಕ್ಕೆ ಅಭಿವೃದ್ಧಿ ವೆಚ್ಚದ ಅನುಪಾತವು ಹೆಚ್ಚಾಗಿತ್ತು.
- ಆದಾಗ್ಯೂ, ಬಂಡವಾಳ ವೆಚ್ಚಕ್ಕೆ ಒಟ್ಟು ವೆಚ್ಚದ ಅನುಪಾತವು ಸಾಮಾನ್ಯ ವರ್ಗದ ರಾಜ್ಯಗಳಿಗಿಂತ ಕಡಿಮೆಯಿದ್ದಿತು.
- 2016–17ರಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಒಟ್ಟು ವೆಚ್ಚಗಳ ಅನುಪಾತವು ಶೇಕಡ 14.50ರಷ್ಟಿದ್ದು ಸಾಮಾನ್ಯ ವರ್ಗದ ರಾಜ್ಯಗಳ (ಶೇಕಡ 16.70) ಸರಾಸರಿ ಅನುಪಾತಕ್ಕಿಂತ ಕಡಿಮೆಯಿದ್ದಿತು.




- 2016–17ರಲ್ಲಿ ಶಿಕ್ಷಣ ಮತ್ತು ಆರೋಗ್ಯ ಸೇವೆಗಳ ಮೇಲಿನ ವೆಚ್ಚಗಳ ರಾಜ್ಯದ ಸರಾಸರಿ ಅನುಪಾತವು ಸಾಮಾನ್ಯ ವರ್ಗದ ರಾಜ್ಯಗಳ ಸರಾಸರಿ ಅನುಪಾತಕ್ಕಿಂತ ಕಡಿಮೆಯಿದ್ದಿತು.

**(ಕಂಡಿಕೆ 1.7.1)**

### 1.13.3 ಸರ್ಕಾರದ ವೆಚ್ಚ ಮತ್ತು ಹೂಡಿಕೆಗಳ ವಿತ್ತೀಯ ವಿಶ್ಲೇಷಣೆ

- ಮಾರ್ಚ್ 2017ರಲ್ಲಿದ್ದಂತೆ, ಸರ್ಕಾರವು ₹63,115 ಕೋಟಿಗಳನ್ನು 84 ಸರ್ಕಾರಿ ಕಂಪೆನಿಗಳಲ್ಲಿ, ಒಂಭತ್ತು ಶಾಸನಬದ್ಧ ನಿಗಮಗಳು, 43 ಕೂಡು ಬಂಡವಾಳ ಕಂಪೆನಿಗಳು ಮತ್ತು ಸಹಕಾರ ಸಂಸ್ಥೆಗಳು/ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಸೇರಿದಂತೆ ಬ್ಯಾಂಕುಗಳಲ್ಲಿ ಹೂಡಿದೆ.
- ಇದು ನಷ್ಟದಲ್ಲಿದ್ದ ನಾಲ್ಕು ಕಂಪೆನಿ/ನಿಗಮಗಳಲ್ಲಿನ ₹24,474 ಕೋಟಿಗಳ ಹೂಡಿಕೆಯನ್ನು ಒಳಗೊಂಡಿತ್ತು (ಶೇಕಡ 39).
- ಐದು ಕಂಪೆನಿಗಳ/ನಿಗಮಗಳಲ್ಲಿನ ₹916.61 ಕೋಟಿಗಳ ಹೂಡಿಕೆಯು ಮಾರ್ಚ್ 2017ರ ಅಂತ್ಯಕ್ಕೆ ಸಾರ್ವಜನಿಕ ಲೆಕ್ಕಗಳಲ್ಲಿ ಇಡಲಾಗಿತ್ತು.
- ಹೂಡಿಕೆಗಳ ಮೇಲಿನ ಪ್ರತಿಫಲವು ನಗಣ್ಯವಾಗಿತ್ತು (₹82.50 ಕೋಟಿ).

**(ಕಂಡಿಕೆ 1.8.2)**



## 1.14 ರಾಜ್ಯ ಸರ್ಕಾರ ನೀಡಿದ ಸಾಲಗಳು ಮತ್ತು ಮುಂಗಡಗಳು

ಕಂಪೆನಿಗಳು, ನಿಗಮಗಳು ಮತ್ತು ಸಹಕಾರಿ ಸಂಸ್ಥೆಗಳಲ್ಲಿ ಹೂಡಿಕೆಯೊಂದಿಗೆ ಸರ್ಕಾರ ಅನೇಕ ಸಂಸ್ಥೆಗಳಿಗೆ ಸಾಲ ಮತ್ತು ಮುಂಗಡವನ್ನು ನೀಡುತ್ತದೆ. 31 ಮಾರ್ಚ್ 2017ರ ಅಂತ್ಯಕ್ಕೆ ಬಾಕಿಯಿರುವ ಸಾಲಗಳ ಮೊತ್ತಗಳ ₹15,648 ಕೋಟಿಗಳಷ್ಟಿದ್ದವು. ಕಳೆದ ಐದು ವರ್ಷಗಳ ಅವಧಿಯಲ್ಲಿ ಸರ್ಕಾರದ ಸಾಲಗಳ ಮೇಲಿನ ಬಡ್ಡಿಯ ದರವು ಋಣಾತ್ಮಕವಾಗಿದ್ದು, ಇದು ರಾಜ್ಯ ಸರ್ಕಾರ ಪಡೆದ ಸಾಲಗಳು, ಸಾಲಗಳ ನೀಡಿಕೆಗಿಂತ ದುಬಾರಿಯಾಗಿರುವುದನ್ನು ಸೂಚಿಸುತ್ತದೆ.

**(ಕಂಡಿಕೆ 1.8.5)**

## 1.15 ನಗದು ಶಿಲ್ಕುಗಳು ಮತ್ತು ನಗದು ಶಿಲ್ಕುಗಳ ಹೂಡಿಕೆ

- ವರ್ಷದ ಅಂತ್ಯಕ್ಕೆ ನಗದು ಶಿಲ್ಕು ₹34,354 ಕೋಟಿಗಳಷ್ಟಿದ್ದು, ಹಿಂದಿನ ವರ್ಷಕ್ಕಿಂತ ಶೇಕಡ 27ರಷ್ಟು ಅಧಿಕವಾಗಿತ್ತು.
- ಅಧಿಕ ನಗದು ಶಿಲ್ಕಿಗೆ 2016–17ರಲ್ಲಿ ಪಡೆದ ₹28,007 ಕೋಟಿಗಳ ಮೊತ್ತದ ಮಾರುಕಟ್ಟೆ ಸಾಲಗಳು ಮುಖ್ಯ ಕಾರಣವಾಗಿದೆ.
- ಅಧಿಕ ನಗದು ಶಿಲ್ಕನ್ನು ಭಾಗಶ: ಸರಾಸರಿ ವಾರ್ಷಿಕ ಶೇಕಡ 3.09 ಬಡ್ಡಿ ದರದ ಭಾರತೀಯ ರಿಸರ್ವ್ ಬ್ಯಾಂಕಿನ 14 ದಿನಗಳ ತಾತ್ಕಾಲಿಕ ಟ್ರೆಜರಿ ಬಿಲ್ಲುಗಳಲ್ಲಿ ಮತ್ತು ಭಾಗಶ: ಸರಾಸರಿ ವಾರ್ಷಿಕ ಶೇಕಡ 6.49ರ ಬಡ್ಡಿದರ ಭಾರತೀಯ ರಿಸರ್ವ್ ಬ್ಯಾಂಕಿನ 91 ದಿನಗಳ ತಾತ್ಕಾಲಿಕ ಟ್ರೆಜರಿ ಬಿಲ್ಲುಗಳಲ್ಲಿ ಹೂಡಿಕೆ ಮಾಡಲಾಗಿತ್ತು. ಪ್ರತಿಯಾಗಿ ವಾರ್ಷಿಕ ಸರಾಸರಿ ಶೇಕಡ 7.34 ಬಡ್ಡಿದರದಲ್ಲಿ ಸಾಲಗಳನ್ನು ಮಾಡಲಾಗಿತ್ತು.

**(ಕಂಡಿಕೆ 1.8.6)**



## 1.16 ಆಸ್ತಿಗಳು ಮತ್ತು ಜವಾಬ್ದಾರಿಗಳು

2015–17ರಲ್ಲಿ ಆಸ್ತಿಗಳು ಮತ್ತು ಜವಾಬ್ದಾರಿಗಳ ಸ್ಥಿತಿಗತಿಯನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ:

(ಕೋಟಿ ರೂಪಾಯಿಗಳಲ್ಲಿ)

| ಜವಾಬ್ದಾರಿಗಳು | | | | ಆಸ್ತಿಗಳು | | | |
|---|---|---|---|---|---|---|---|
| | **2015-16** | **2016-17** | **ಶೇಕಡ** | | **2015-16** | **2016-17** | **ಶೇಕಡ** |
| ಸಂಚಿತ ನಿಧಿ | **1,22,547** | **1,46,283** | **19** | ಸಂಚಿತ ನಿಧಿ | **1,90,566** | **2,20,527** | **16** |
| ಅ. ಆಂತರಿಕ ಋಣ | 1,09,545 | 1,32,489 | 21 | ಬಂಡವಾಳ ವೆಚ್ಚ | 1,76,753 | 2,04,880 | 16 |
| ಆ. ಕೇಂದ್ರ ಸರ್ಕಾರದ ಸಾಲಗಳು ಮತ್ತು ಮುಂಗಡಗಳು | 13,002 | 13,794 | 6 | ಸಾಲಗಳು ಮತ್ತು ಮುಂಗಡಗಳು | 13,813 | 15,647 | 13 |
| ಆಯವ್ಯಯದ ಹೊರಗಿನ ಸಾಲಗಳು | **7,699** | **10,248** | **33** | ನಗದು | **27,118** | **34,354** | **27** |
| ಸಾರ್ವಜನಿಕ ಲೆಕ್ಕ* | **53,076** | **64,788** | **22** | | | | |
| ಅ. ಸಣ್ಣ ಉಳಿತಾಯಗಳು, ಭವಿಷ್ಯ ನಿಧಿಗಳು ಇತ್ಯಾದಿ | 22,262 | 24,920 | 12 | | | | |
| ಆ.ಮೀಸಲು ನಿಧಿಗಳು | 10,371 | 16,384 | 58 | | | | |
| ಇ.ಠೇವಣಿಗಳು | 20,443 | 23,484 | 15 | | | | |

* ಜವಾಬ್ದಾರಿಗಳು ನಿವ್ವಳ ಆಧಾರಿತವಾಗಿವೆ. ಇವು ಮೀಸಲಿಟ್ಟ ನಿಧಿಗಳಿಂದ ಮಾಡಿದ ₹10,272 ಕೋಟಿ (2015–16 ಮತ್ತು 2016–17) ಹೂಡಿಕೆಗಳನ್ನು ಒಳಗೊಂಡಿಲ್ಲ.

ಆಸ್ತಿಗಳ ವೃದ್ಧಿಯ ದರವು 2015–16ರಲ್ಲಿ ಶೇಕಡ 13ರಿಂದ 2016–17ರಲ್ಲಿ ಶೇಕಡ 16ಕ್ಕೆ ಏರಿದ್ದು ಆಯವ್ಯಯದ ಹೊರಗಿನ ಸಾಲಗಳೂ ಸೇರಿದಂತೆ ಜವಾಬ್ದಾರಿಗಳ ವೃದ್ಧಿಯ ದರವು 2015–16ರಲ್ಲಿ ಶೇಕಡ 16ರಷ್ಟಿದ್ದು 2016–17ರಲ್ಲಿ ಶೇಕಡ 19ಕ್ಕೆ ಏರಿದೆ.

**(ಕಂಡಿಕೆ 1.9.1)**

## 1.17 ವಿತ್ತೀಯ ಜವಾಬ್ದಾರಿಗಳು

ರಾಜ್ಯದ ವಿತ್ತೀಯ ಜವಾಬ್ದಾರಿಗಳು 2015–16ರಲ್ಲಿದ್ದ ₹1,83,322 ಕೋಟಿಗಳಿಂದ 2016–17ರಲ್ಲಿ ₹2,21,319 ಕೋಟಿಗಳಿಗೆ ಏರಿ ಶೇಕಡ 21ರಷ್ಟು ಏರಿಕೆ ಕಂಡಿತು. ಇದು ಕ್ರೋಢೀಕೃತ ನಿಧಿ ಜವಾಬ್ದಾರಿಗಳು (₹1,46,283 ಕೋಟಿ), ಸಾರ್ವಜನಿಕ ಲೆಕ್ಕ ಜವಾಬ್ದಾರಿಗಳು (₹64,788 ಕೋಟಿ) ಮತ್ತು ಆಯವ್ಯಯ ಹೊರಗಿನ ಜವಾಬ್ದಾರಿಗಳು (₹10,248 ಕೋಟಿ).

**(ಕಂಡಿಕೆ 1.9.2)**

## 1.18 ಮೀಸಲು ನಿಧಿಯ ವ್ಯವಹಾರಗಳು

- ₹2,070 ಕೋಟಿಗಳಷ್ಟು ಋಣ ಪರಿಹಾರ ನಿಧಿಯಿಂದ ಮಾಡಿದ ಹೂಡಿಕೆಯ ಮೇಲೆ ಸ್ವೀಕರಿಸಿದ ₹317.45 ಕೋಟಿ ಬಡ್ಡಿಯು ರಾಜ್ಯ ಸರ್ಕಾರದ ಲೆಕ್ಕಗಳಲ್ಲಿ ಹಾದು ಹೋಗದಿದ್ದುದರಿಂದ ರಾಜ್ಯ ಸರ್ಕಾರದ ಆಸ್ತಿಯ ಭಾಗವಾಗಿರಲಿಲ್ಲ.
- 2016–17ರವರೆಗೆ ಸಂಗ್ರಹಿಸಿದ ಹಸಿರು ತೆರಿಗೆ ಉಪಕರವಾದ ₹57.89 ಕೋಟಿಗಳನ್ನು ಅದರ ವೆಚ್ಚದೊಂದಿಗೆ ಸಾರ್ವಜನಿಕ ಲೆಕ್ಕಗಳಲ್ಲಿನ ನಿಧಿಯ ಲೆಕ್ಕಕ್ಕೆ ವರ್ಗಾವಣೆ ಮಾಡಿರಲಿಲ್ಲ.
- ಸಮರ್ಪಕ ವಿತ್ತೀಯ ನಿರ್ವಹಣೆಯ ದೃಷ್ಟಿಯಿಂದ ಅಗತ್ಯವಿದ್ದ ಖಾತರಿ ವಿಮೋಚನಾ ನಿಧಿಯನ್ನು ಕಾರ್ಯಶೀಲಗೊಳಿಸಿರಲಿಲ್ಲ.

**(ಕಂಡಿಕೆ 1.9.4)**

## 1.19 ಋಣ ನಿರ್ವಹಣೆ

2016–17ರಲ್ಲಿ ರಾಜ್ಯಕ್ಕೆ ಲಭ್ಯವಿದ್ದ ನಿವ್ವಳ ಋಣವು (₹23,736 ಕೋಟಿ), ಹಿಂದಿನ ವರ್ಷಕ್ಕೆ ಹೋಲಿಸಿದಲ್ಲಿ (₹16,962 ಕೋಟಿ) ಶೇಕಡ 40ರಷ್ಟು ಏರಿಕೆಯಾಯಿತು.

- ರಾಜಸ್ವ ಸ್ವೀಕೃತಿಗಳಿಗೆ ಬಡ್ಡಿ ಪಾವತಿಯ ಅನುಪಾತದಿಂದ (ಐಪಿ/ಆರ್ಆರ್) ಅಳೆಯಲಾಗುವ ಬಡ್ಡಿ ಪಾವತಿಯ ಹೊರೆಯು 2012–13ರಿಂದ 2016–17ರವರೆಗೆ ಶೇಕಡ 9ರಿಂದ ಶೇಕಡ 9.7ರ ಶ್ರೇಣಿಯಲ್ಲಿತ್ತು.
- ಹದಿಮೂರನೇ ಹಣಕಾಸು ಆಯೋಗದ ಶಿಫಾರಸ್ಸಿನಂತೆ ಎನ್ಎಸ್ಎಸ್ಎಫ್ ಸಾಲಗಳ ಮೇಲಿನ ಬಡ್ಡಿ ಪರಿಹಾರವು ₹192.42 ಕೋಟಿಗಳಷ್ಟು ಕಡಿಮೆ ಸ್ವೀಕೃತಿಯಾಗಿತ್ತು.

**(ಕಂಡಿಕೆ 1.10.2 ಮತ್ತು 1.10.5.1)**

# ಅಧ್ಯಾಯ ೨

# ಹಣಕಾಸು ನಿರ್ವಹಣೆ ಮತ್ತು ಆಯವ್ಯಯ ನಿಯಂತ್ರಣ

## 2.1 ಪೀಠಿಕೆ


ಈ ಅಧ್ಯಾಯವು 31 ಮಾರ್ಚ್ 2017ಕ್ಕೆ ಅಂತ್ಯಗೊಂಡ ವರ್ಷದ ರಾಜ್ಯ ಸರ್ಕಾರದ ಧನವಿನಿಯೋಗ ಲೆಕ್ಕಗಳ ಪರಿಶೀಲನೆಯಿಂದ ಕಂಡುಬಂದ ಲೆಕ್ಕಪರಿಶೋಧನಾ ಅಂಶಗಳನ್ನು ಹೊಂದಿದೆ.

### 2.1.1 ಧನವಿನಿಯೋಗ ಲೆಕ್ಕಗಳು

ಧನವಿನಿಯೋಗ ಲೆಕ್ಕಗಳು ಸರ್ಕಾರದ ಪ್ರತಿ ಆರ್ಥಿಕ ವೆಚ್ಚದ ಧನವಿನಿಯೋಗ ಅಧಿನಿಯಮಗಳಿಗೆ ಸಹಬಂಧಗೊಳಿಸಿದ ಅನುಸೂಚಿಗಳಲ್ಲಿ ನಿಗದಿಪಡಿಸಲಾದ ವಿವಿಧ ಉದ್ದೇಶಗಳ ಪುರಸ್ಕೃತ ಅನುದಾನ ಮತ್ತು ಪ್ರಭೃತ ವಿನಿಯೋಗಗಳಿಗೆ ಹೋಲಿಸಿದ ಪುರಸ್ಕೃತ ಮತ್ತು ಪ್ರಭೃತ ವೆಚ್ಚಗಳ ಲೆಕ್ಕಗಳಾಗಿವೆ.

## 2.2 ಧನವಿನಿಯೋಗ ಲೆಕ್ಕಗಳ ಸಾರಾಂಶ

2016–17ರಲ್ಲಿ ಮಾಡಿದ ಅವಕಾಶಗಳು ಮತ್ತು ವಾಸ್ತವಿಕ ವೆಚ್ಚಗಳನ್ನು ಕೆಳಗಿನ ನಕ್ಷೆಯಲ್ಲಿ ವಿವರಿಸಲಾಗಿದೆ.



- 2016–17ರಲ್ಲಿ ₹1,86,052 ಕೋಟಿಗಳ ಒಟ್ಟು ಅವಕಾಶಗಳಿಗೆ ಪ್ರತಿಯಾಗಿ ₹1,73,045 ಕೋಟಿಗಳ ವೆಚ್ಚವನ್ನು ಭರಿಸಲಾಗಿದ್ದು, ₹13,007 ಕೋಟಿಗಳ ಅವಕಾಶವು ಬಳಕೆಯಾಗದೇ ಉಳಿಯಿತು (ಶೇಕಡ ಏಳು).
- 16 ಬೇಡಿಕೆ/ಧನವಿನಿಯೋಗಗಳ ಪ್ರತಿ ಪ್ರಕರಣದಲ್ಲಿ ₹100 ಕೋಟಿ ಮತ್ತು ಅದಕ್ಕಿಂತ ಹೆಚ್ಚಿನ ಬಳಸದ ಅವಕಾಶಗಳು 22 ಪ್ರಕರಣಗಳಲ್ಲಿದ್ದವು. ಪ್ರಮುಖವಾಗಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಆರ್ಥಿಕ, ನಗರಾಭಿವೃದ್ಧಿ, ಶಿಕ್ಷಣ, ಜಲಸಂಪನ್ಮೂಲ ಮತ್ತು ಋಣಸೇವೆಗಳಲ್ಲಿ ಅಧಿಕ ಮೊತ್ತದ ಬಳಸಲಾಗದ ಅವಕಾಶಗಳಿದ್ದವು.

**(ಕಂಡಿಕೆ 2.2.5 ಮತ್ತು 2.7.1)**

## 2.3 ಹೆಚ್ಚುವರಿಗಳ ಆದೇಶಗಳ ಜಾರಿ

- 2016–17ರಲ್ಲಿ ಪ್ರಾಥಮಿಕ ಆಯವ್ಯಯದಲ್ಲಿರದ 26 ಬೇಡಿಕೆಗಳಡಿ ರಾಜಸ್ವ/ಬಂಡವಾಳ ವಿಭಾಗಗಳಡಿ 293 ಕಾರ್ಯಕಾರಿ ಆದೇಶಗಳ ಮೂಲಕ ವೆಚ್ಚವನ್ನು ಭರಿಸಲು ₹6,057.11 ಕೋಟಿಗಳನ್ನು ಹೆಚ್ಚುವರಿಗಳಾಗಿ ಬಿಡುಗಡೆಗೊಳಿಸಲಾಯಿತು. ಇವುಗಳನ್ನು ತದನಂತರ ಪೂರಕ ಅಂದಾಜುಗಳ ಮೂಲಕ ಸಕ್ರಮಗೊಳಿಸಲಾಯಿತು.
- ಮೂರು ಬೇಡಿಕೆಗಳಡಿ ನಾಲ್ಕು ಪ್ರಕರಣಗಳಲ್ಲಿ ಹೆಚ್ಚುವರಿಗಳಾಗಿ ಜಾರಿಯಾದ ₹1.03 ಕೋಟಿಗಳ ಕಾರ್ಯಕಾರಿ ಆದೇಶಗಳನ್ನು ಪೂರಕ ಅಂದಾಜುಗಳಲ್ಲಿ ಸಕ್ರಮಗೊಳಿಸದಿದ್ದುದ್ದರಿಂದ ₹0.44 ಕೋಟಿಗಳ ಅಧಿಕ ವೆಚ್ಚದಲ್ಲಿ ಪರಿಣಮಿಸಿತು.

**(ಕಂಡಿಕೆ 2.2.6)**



## 2.4 ಸಕ್ರಮೀಕರಣದ ಅಗತ್ಯವಿರುವ ಅಧಿಕ ವೆಚ್ಚ

- 2012–13ರಿಂದ 2015–16ರ ಅವಧಿಯ ₹1,124.66 ಕೋಟಿಗಳ ಒಟ್ಟು ಅಧಿಕ ವೆಚ್ಚವು ಇನ್ನೂ ಸಕ್ರಮಗೊಳ್ಳಬೇಕಿದೆ.
- 2016–17ರ ಅವಧಿಯಲ್ಲಿ ಐದು ಅನುದಾನಗಳು/ಧನವಿನಿಯೋಗಗಳಿಗೆ ಪ್ರತಿಯಾಗಿ ಭರಿಸಲಾದ ₹1,085.41 ಕೋಟಿಗಳಷ್ಟು ಅಧಿಕ ವೆಚ್ಚಕ್ಕೆ ಭಾರತ ಸಂವಿಧಾನದ ಅನುಚ್ಛೇದ 205ರಡಿ ಸಕ್ರಮೀಕರಣದ ಅಗತ್ಯವಿದೆ.

**(ಕಂಡಿಕೆ 2.3.1 ಮತ್ತು 2.3.2)**

## 2.5 ಹೊಸ ಸೇವೆ/ಹೊಸ ಸೇವಾ ಸಾಧನ

'ಹೊಸ ಸೇವೆ/ಹೊಸ ಸೇವಾ ಸಾಧನ' ವೆಂದು ಪರಿಗಣಿಸಬೇಕಿದ್ದ ಐದು ಅನುದಾನಗಳಿಗೆ ಸೇರಿದ ಐದು ಪ್ರಕರಣಗಳಲ್ಲಿ ₹124.12 ಕೋಟಿಗಳಷ್ಟು ವೆಚ್ಚವನ್ನು ಶಾಸಕಾಂಗದ ಅನುಮೋದನೆಯಿಲ್ಲದೇ ಭರಿಸಲಾಯಿತು.

**(ಕಂಡಿಕೆ 2.3.3)**

## 2.6 ಆಯವ್ಯಯದಲ್ಲಿನ ದೋಷಗಳು

- ₹5.57 ಕೋಟಿಗಳಷ್ಟು ವೆಚ್ಚವನ್ನು ಬಂಡವಾಳ ವಿಭಾಗದ ಬದಲು ರಾಜಸ್ವ ವಿಭಾಗದಡಿ ಮತ್ತು ₹40.12 ಕೋಟಿಗಳಷ್ಟು ವೆಚ್ಚವನ್ನು ರಾಜಸ್ವ ವಿಭಾಗದ ಬದಲು ಬಂಡವಾಳ ವಿಭಾಗದಡಿ ವರ್ಗೀಕರಿಸಲಾಗಿತ್ತು.
- 2016–17ರ ಸಾಲಿನ ಆಯವ್ಯಯ ತಯಾರಿಯಲ್ಲಿ ಆರು ಪ್ರಕರಣಗಳಲ್ಲಿ ₹5.61 ಕೋಟಿಗಳಷ್ಟು ಮೊತ್ತಕ್ಕೆ ಪ್ರಭೃತ ವಿಭಾಗದ ಬದಲು ಪುರಸ್ಕೃತ ವಿಭಾಗದಡಿ ಅವಕಾಶವನ್ನು ಪಡೆಯಲಾಗಿದ್ದು ಅಪವರ್ಗೀಕರಣವನ್ನು ಗಮನಿಸಲಾಯಿತು.

**(ಕಂಡಿಕೆ 2.4.1)**

## 2.7 ‘059–ಇತರ ವೆಚ್ಚಗಳು’ ಎಂಬ ಬಹು ಉದ್ದೇಶ ಲೆಕ್ಕಶೀರ್ಷಿಕೆಯ ಬಳಕೆ

₹1,265.77 ಕೋಟಿಗಳ ವೆಚ್ಚವನ್ನು ಪೂರಕ ವೆಚ್ಚಗಳು, ಸಹಾಯಾನುದಾನ–ಸಾಮಾನ್ಯ, ಸಹಾಯಾನುದಾನ–ಆಸ್ತಿ ಸೃಜನೆ, ಸಹಾಯಧನ ಮುಂತಾದ ಉದ್ದೇಶ ಶೀರ್ಷಿಕೆಯ ಬದಲು ‘059–ಇತರ ವೆಚ್ಚಗಳು’ ಉದ್ದೇಶ ಶೀರ್ಷಿಕೆಯಡಿ ತಪ್ಪಾಗಿ ವರ್ಗೀಕರಿಸಲಾಗಿತ್ತು.

**(ಕಂಡಿಕೆ 2.6)**

## 2.8 ಪೂರಕ ಅವಕಾಶಗಳು

ಕರ್ನಾಟಕ ವಿತ್ತೀಯ ಜವಾಬ್ದಾರಿ ಅಧಿನಿಯಮ, 2002ರ ಅನುಚ್ಛೇದ (6), ಉಪ ಪರಿಚ್ಛೇದ 5ರಡಿ ಅಗತ್ಯವಿರುವಂತೆ ವ್ಯವಹಾರಗಳನ್ನು ರಾಜಸ್ವ ತಟಸ್ಥ ಮಾಡಲು ಇತರ ಬೇಡಿಕೆಗಳಡಿಯ ಉಳಿತಾಯದಿಂದ ಪೂರಕ ಅನುದಾನಗಳು ಬೆಂಬಲ ಹೊಂದಿರಲಿಲ್ಲ.

**(ಕಂಡಿಕೆ 2.7.3)**

### 2.8.1 ಅನಾವಶ್ಯಕ/ಅಧಿಕ/ಸಾಕಷ್ಟಿಲ್ಲದ ಪೂರಕ ಅವಕಾಶಗಳು

- 16 ಅನುದಾನಗಳಡಿ ಪಡೆದ ₹2,047.40 ಕೋಟಿಗಳ ಪೂರಕ ಅವಕಾಶಗಳು ಅನವಶ್ಯಕವಾಗಿದ್ದವು. ಏಳು ಅನುದಾನಗಳಡಿ ಪಡೆದ ₹1,055.39 ಕೋಟಿಗಳ ಪೂರಕ ಅವಕಾಶಗಳು ಕಡಿಮೆಯಾಗಿದ್ದು ₹453.02 ಕೋಟಿ ಅಧಿಕ ವೆಚ್ಚವು ಒಳಗೊಂಡಿರಲಿಲ್ಲ.
- 10 ಬೇಡಿಕೆಗಳಡಿ ಪಡೆದ ರೂ.203.82 ಕೋಟಿ ಪೂರಕ ಅವಕಾಶಗಳು ಅಗತ್ಯಕ್ಕಿಂತ ಹೆಚ್ಚಾಗಿದ್ದು, ರೂ.112.52 ಕೋಟಿಗಳು ಬಳಕೆಯಾಗದೇ ಉಳಿದಿದ್ದವು.

**(ಕಂಡಿಕೆ 2.7.5, 2.7.6 ಮತ್ತು 2.7.7)**

## 2.9 ಅನವಶ್ಯಕ/ಅಧಿಕ/ಸಾಕಷ್ಟಿಲ್ಲದ ನಿಧಿಗಳ ಪುನರ್ವಿನಿಯೋಗ

- 62 ಪ್ರಕರಣಗಳಲ್ಲಿ ನಿಧಿಗಳ ಪುನರ್ವಿನಿಯೋಗವನ್ನು ವಿವೇಚನಾಯುಕ್ತವಾಗಿ ಮಾಡದಿದ್ದುದು ಬಳಕೆಯಾಗದ ಅವಕಾಶಗಳು ಅಥವಾ ಅವಕಾಶಗಳಿಗಿಂತ ಹೆಚ್ಚಾಗುವಲ್ಲಿ ಪರಿಣಮಿಸಿತು.
- 22 ಪ್ರಕರಣಗಳಲ್ಲಿ ಪುನರ್ವಿನಿಯೋಗದ ಮೂಲಕ ಒದಗಿಸಲಾದ ₹497.20 ಕೋಟಿಗಳ ಹೆಚ್ಚುವರಿ ನಿಧಿಗಳು, ₹221.95 ಕೋಟಿಗಳ ಒಟ್ಟಾರೆ ಬಳಕೆಯಾಗದಿರುವಲ್ಲಿ ಪರಿಣಮಿಸಿತು.

**(ಕಂಡಿಕೆ 2.7.8,2.7.9 ಮತ್ತು 2.7.10)**

## 2.10 ಬಳಕೆಯಾಗದ ಅವಕಾಶಗಳ ಅಧ್ಯರ್ಪಣೆ

- 18 ಅನುದಾನ/ಧನರ್ವಿನಿಯೋಗಗಳಲ್ಲಿ ಬಳಕೆಯಾಗದ ₹4,387.13 ಕೋಟಿಗಳ ಸಂಪೂರ್ಣ ಅವಕಾಶವನ್ನು ಅಧ್ಯರ್ಪಣೆ ಮಾಡಿರಲಿಲ್ಲ.
- 29 ಅನುದಾನಗಳು / ಧನವಿನಿಯೋಗಗಳಡಿಯಲ್ಲಿ ಭಾಗಶ: ಅಧ್ಯರ್ಪಣೆಯಾಗಿದ್ದು ಬಳಕೆಯಾಗದ ಶೇಕಡ 85ರಷ್ಟು ಅವಕಾಶವನ್ನು ಅಧ್ಯರ್ಪಣೆ ಮಾಡಿರಲಿಲ್ಲ.

**(ಕಂಡಿಕೆ 2.7.12)**

## 2.11 ಕುಟುಂಬ ಪಿಂಚಣಿಯ ಅಧಿಕ ಪಾವತಿ

151 ಪ್ರಕರಣಗಳಲ್ಲಿ ₹1.39 ಕೋಟಿಗಳಷ್ಟು ಪಿಂಚಣಿಯನ್ನು ಅಧಿಕವಾಗಿ ಸೆಳೆಯಲಾಗಿದ್ದು 79 ಪ್ರಕರಣಗಳಲ್ಲಿ ₹1.23 ಕೋಟಿಗಳನ್ನು ಹಿಂದಿನ ವರ್ಷಗಳ ಲೆಕ್ಕಪರಿಶೋಧನೆಯಲ್ಲಿ ಹೇಳಿದ್ದರೂ ಅಧಿಕ ಪಾವತಿಯನ್ನು ಮುಂದುವರೆಸಲಾಗಿತ್ತು.

**(ಕಂಡಿಕೆ 2.10)**

ಅಧ್ಯಾಯ
೩

# ಆರ್ಥಿಕ ನಿರೂಪಣೆ

## 3.1 ಪೀಠಿಕೆ

ಈ ಅಧ್ಯಾಯವು ಪ್ರಸಕ್ತ ಸಾಲಿನ ರಾಜ್ಯ ಸರ್ಕಾರದ ಇಲಾಖೆಗಳು ವಿವಿಧ ಆರ್ಥಿಕ ನಿಯಮಗಳು, ಪದ್ಧತಿಗಳು, ನಿರ್ದೇಶನಗಳ ಅನುಪಾಲನೆಯ ಸ್ಥಿತಿಗತಿ ಮತ್ತು ಪಕ್ಷಿನೋಟವನ್ನು ಒದಗಿಸುತ್ತದೆ.

## 3.2 ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸದಿರುವುದು

2016–17ರವರೆಗೆ ಬಿಡುಗಡೆಗೊಳಿಸಿದ ಅನುದಾನಗಳ ಪೈಕಿ ₹723.94 ಕೋಟಿಗಳ ಮೊತ್ತಕ್ಕೆ ಹಣಬಳಕೆ ಪ್ರಮಾಣಪತ್ರಗಳು ಬಾಕಿಯಿದ್ದವು.

ಹಣಬಳಕೆ ಪ್ರಮಾಣಪತ್ರಗಳ ಸಲ್ಲಿಸದಿರುವಿಕೆಯು ಬಹುಪಾಲು ಪ್ರಕರಣಗಳು ವೈದ್ಯಕೀಯ ಮತ್ತು ಜನಾರೋಗ್ಯ ಇಲಾಖೆಗೆ ಸಂಬಂಧಿಸಿದ್ದವು (ಶೇಕಡ 66).

(ಕಂಡಿಕೆ 3.1)

## 3.3 ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳು

- ಮಾರ್ಚ್ 2017ರ ಅಂತ್ಯಕ್ಕೆ 3,272 ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಮೂಲಕ ಸೆಳೆದ ₹84.81 ಕೋಟಿಗಳಿಗೆ ವಿವರವಾದ ಬಿಲ್ಲುಗಳು ಬಾಕಿಯಿದ್ದವು.
- ಬಾಕಿಯಿದ್ದ ಪಾವತಿಯಾಗದ ವಿವರವಾದ ಸಾದಿಲ್ವಾರು ಬಿಲ್ಲುಗಳು ಪ್ರಧಾನ ಲೆಕ್ಕಶೀರ್ಷಿಕೆ 2055–ಪೊಲೀಸ್ (₹32.19 ಕೋಟಿ), ಪ್ರಧಾನ ಲೆಕ್ಕಶೀರ್ಷಿಕೆ 2406–ಅರಣ್ಯ ಮತ್ತು ವನ್ಯಜೀವಿ (₹9.25 ಕೋಟಿ), ಪ್ರಧಾನ ಲೆಕ್ಕಶೀರ್ಷಿಕೆ 2015–ಚುನಾವಣೆ (₹6.85 ಕೋಟಿ) ಮತ್ತು ಪ್ರಧಾನ ಲೆಕ್ಕಶೀರ್ಷಿಕೆ 3475–ಇತರ ಸಾಮಾನ್ಯ ಆರ್ಥಿಕ ಸೇವೆಗಳು (₹4.63 ಕೋಟಿ) ಇವುಗಳಿಗೆ ಸಂಬಂಧಿಸಿತ್ತು.

(ಕಂಡಿಕೆ 3.7)

### 3.4 ವೈಯಕ್ತಿಕ ಠೇವಣಿ (ಪಿಡಿ) ಖಾತೆಯಲ್ಲಿ ನಿಧಿಗಳ ನಿಲುಗಡೆ

ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ, ಶುಲ್ಕದ ಮರುಪಾವತಿ ಮತ್ತು ಪ್ರೋತ್ಸಾಹಧನಗಳಿಗೆ ಸಂಬಂಧಿಸಿದ ₹260.29 ಕೋಟಿ ಹಣವನ್ನು ಬಳಸದೇ ವೈಯಕ್ತಿಕ ಠೇವಣಿ ಖಾತೆಗೆ ಜಮೆ ಮಾಡಲಾಗಿತ್ತು (ಮಾರ್ಚ್ 2017).

**(ಕಂಡಿಕೆ 3.8.2)**

### 3.5 ಲೆಕ್ಕಪತ್ರಗಳ ಮೇಲಿನ ವ್ಯಾಖ್ಯಾನಗಳು

- 2016–17ರಲ್ಲಿ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನಲ್ಲಿ ₹90.37 ಕೋಟಿಗಳು ಲಭ್ಯವಿದ್ದು ಭರಿಸಿದ ವೆಚ್ಚವು ಕೇವಲ ₹79.83 ಕೋಟಿಗಳಾಗಿದ್ದರಿಂದ ಬಿಡುಗಡೆಗೊಳಿಸಿದ ₹106.96 ಕೋಟಿಗಳು ಅನವಶ್ಯಕವಾಗಿದ್ದವು.

**(ಕಂಡಿಕೆ 3.10.2)**

- ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಖರೀದಿಗೆ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿಗೆ ಬಿಡುಗಡೆಗೊಳಿಸಿದ ₹115.10 ಕೋಟಿಗಳು ಕೈತಪ್ಪಿ ಹೋಗುವುದನ್ನು ತಡೆಯಲು ಬ್ಯಾಂಕೊಂದರಲ್ಲಿ ಠೇವಣಿ ಇಡಲಾಗಿದ್ದು, ಬ್ಯಾಂಕ್ ಖಾತೆಯಲ್ಲಿಯೇ ಬಳಕೆಯಾಗದೆ ಉಳಿದಿತ್ತು (ಅಕ್ಟೋಬರ್ 2017).

**(ಕಂಡಿಕೆ 3.10.4)**



# NOTES

# NOTES

# NOTES

# NOTES